**ವ್ಯಾಖ್ಯಾನ**

# <u>ಎಲೆ ಮನವೆ ಹರಿಧ್ಯಾನ ಮಾಡು</u>

**Ref.:** Dr. A.B. Shamachar, Haridasa Hrudaya, Srimadhwa Grantha Prakashana, Bengaluru (2016), page No. 82.

'ಚಂಚಲೋಽಯಂ ಮನೋ ಮೀನೋ' ಎಂದಂತೆ ಮನಸ್ಸು ಮೀನಿನಂತೆ ಬಲು ಚಂಚಲ. ಹೀಗೆ ಎಲ್ಲ ಇಂದ್ರಿಯಂಗಳೂ ವಿಷಯಗಳಿಗೆ ಬಲಿಯಾಗಿ ಬುದ್ಧಿಯನ್ನು ಕೆಡಿಸುತ್ತವೆ. ಅದಕ್ಕೆ ದಾಸರು ಈ ಇಂದ್ರಿಯಂಗಳಿಗೆ ಕೆಲಸಕೊಡಿ ಎಂದು ನಿರ್ದೇಶಿಸಿರುವುದು ಇಲ್ಲಿದೆ.

**ಎಲೆ ಮನವೆ ಹರಿಧ್ಯಾನ ಮಾಡು II ಪ II**

**ಎಲೆ ಜಿಹ್ವೆ ಕೇಳು ಕೇಶವನ ಗುಣಗಳ ನುತಿಸು**
**ಎಲೆ ಮನವೆ ಮುರವೈರಿಯಂಘ್ರಿಯಂಗಳ ಭಜಿಸು**
**ಎಲೆಲೆ ಕರಗಳಿರ ಶ್ರೀಧರನ ಸೇವೆಯ ಮಾಡಿ**
**ಎಲೆ ಕರ್ಣಂಗಳಿರ ಅಚ್ಯುತನ ಕಥೆ ಕೇಳಿ II 1 II**

**ಎಲೆ ನೇತ್ರಗಳಿರ ಶ್ರೀಕೃಷ್ಣಮೂರ್ತಿಯ ನೋಡಿ**
**ಎಲೆ ಪಾದಗಳಿರ ಹರಿಯಾತ್ರೆಯನೆ ಮಾಡಿ**
**ಎಲೆ ನಾಸಿಕವೆ ಮುಕುಂದನ ಚರಣಕರ್ಪಿಸಿದ**
**ತುಳಸಿ ಪರಿಮಳವನಾಘ್ರಾಣಿಸು ಅನುದಿನ II 2 II**

**ಎಲೆ ಶಿರವೆ ನೀ ಕೇಳಧೋಕ್ಷಜನ ಸಿರಿಚರಣ**
**ಜಲರುಹದೊಳಳಿಯಂತೆ ಬಿಡದೆ ಓಲ್ಯಾಡು**
**ಎಲೆ ತನುವೆ ನೀನು ಶ್ರೀಪುರಂದರವಿಟ್ಠಲನ**
**ಸಲೆ ಭಕುತಿ ಜನರ ಸಂಗತಿಯಲ್ಲಿ ಬಾಳು II 3 II**

ಹರಿದಾಸಸಾಹಿತ್ಯದುದ್ದಕ್ಕೂ ಹರಿದಾಸರು ಇಂದ್ರಿಯಗಳಿಗೆ ವಿಶೇಷವಾಗಿ ಮನಸ್ಸಿಗೆ ಹೇಳುತ್ತಾ ಬಂದದ್ದು ಇದನ್ನೇ. ಭಗವಂತ ದಯಪಾಲಿಸಿದ ಈ ಸಾಧನ ಶರೀರದ ಇಂದ್ರಿಯಗಳನ್ನು ಸೂಕ್ತರೀತಿಯಲ್ಲಿ, ದುರ್ಗತಿಯಾಗದಂತೆ ಸವಿಸಿರೆಂದು, ದಾಸರು ಕಳಕಳಿಯಿಂದ ನೆಟ್ಟಗಿರಿ ಎಂದು ಆದೇಶವಿತ್ತರು. ಒಂದು ಕಡೆ 'ಇಂದ್ರಿಯಂಗಳ ಸುಖವ ನೆಚ್ಚದಿರು ಕಂಡ್ಯ' ಎಂದದ್ದು ಇದಕ್ಕಾಗಿಯೆ.

**ತನು ಶುದ್ಧಿ ಇಲ್ಲದವಗೆ ತೀರ್ಥರ ಫಲವೇನು ?**

**ಮನಃಶುದ್ಧಿ ಇಲ್ಲದವಗೆ ಮಂತ್ರದ ಫಲವೇನು ?**

ಎಂದು ಶರೀರಶುದ್ಧಿ ಇಲ್ಲದಿದ್ದಲ್ಲಿ ಏನು ಸತ್ಕರ್ಮಾನುಷ್ಠಾನ ಮಾಡಿದರೂ ವ್ಯರ್ಥವೇ ಎಂದರು. ಶ್ರೀಪಾದರಾಜರು '"ಎನ್ನ ಮನ ವಿಷಯಂಗಳಲ್ಲಿ ಮುಣುಗಿತೋ ಎನ್ನ ತನು ವೃದ್ಧಾಪ್ಯವನು ಐದಿತೋ ll' ಎಂದು ಭಗವಂತನಲ್ಲಿ ಬಿನ್ನೈಸಿಕೊಂಡದ್ದನ್ನು ಕಾಣುತ್ತೇವೆ.

ಇಂದ್ರಿಯ ನಿಗ್ರಹವೆಂಬುದು ಎಲ್ಲ ಸಾಧನೆಗಳಿಗೂ ಸೋಪಾನ. ಆದ್ದರಿಂದ ಆಯಾ ಇಂದ್ರಿಯಗಳಿಗೆ ತಕ್ಕ ಪಾಠ ಕಲಿಸಿರೆಂದರು.

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು. ಲೇಖಕರ ಅನುಮಾನತಿಯೊಂದಿಗೆ.